**(ದಿನಾಂಕ 26.02.2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು.)**

**ಪಾಟೀ ಸವಾಲು : ಆರೋಪಿತರ ಪರ ಶ್ರೀ ಬಿ.ಜಿ.ಬಿ. ವಕೀಲರಿಂದ:-**

ಆರೋಪಿತರು ನನ್ನ ಚಿಕ್ಕಪ್ಪನ ಮಕ್ಕಳು. ನನ್ನ ವಿರುದ್ದ ಸಿವಿಲ್ ದಾವೆ ನಡೆಯುತ್ತಿದ್ದೆ ಎಂದರೆ ಸರಿ. ಇದವುರೆಗೆ ನಮ್ಮ ಮತ್ತು ಆರೋಪಿತರ ನಡುವೆ ಪಾಲುವಿಭಾಗ ಆಗಿಲ್ಲ ಎಂದರೆ ಸರಿ. 17.06.2018 ರಂದು ಬೆಳಿಗ್ಗೆ 8.30 ರ ಸಮಯದಲ್ಲಿ ಆರೋಪಿತರು ಬಂದು ಜಗಳ ಮಾಡಿದರು ಎಂದು ಸುಳ್ಳು ಹೇಳುತ್ತಿದ್ಧೆನೆಂದರೆ ಸರಿಯಲ್ಲ. ಶ್ರೀಮಾತಮ್ಮ ನಮ್ಮ ತಾಯಿಯ ತಲೆ ಕೂದಲು ಹಿಡಿದು ಹೊಡೆದರು ಎಂದರೆ ಸರಿಯಲ್ಲ. ಚಂದ್ರಪ್ಪ ಸೀರೆ ಹಿಡಿದು ಎಳೆದಾಡಿದರು ಎಂದು ಸುಳ್ಳು ಹೇಳುತ್ತಿದ್ಧೇನೆಂದರೆ ಸರಿಯಲ್ಲ. ಚಂದ್ರಪ್ಪ ಕಣಗದಿಂದ ಹೊಡೆದರು ಅಂತಾ ಸುಳ್ಳು ಹೇಳುತ್ತಿದ್ಧೆನೆಂದರೆ ಸರಿಯಲ್ಲ. ಮೇಘರಾಜನಿಗೆ ಆರೋಪಿತರು ಕಣಗದಿಂದ ಹೊಡೆದರು ಎಂದು ಹೇಳಿದ್ದು, ಯಾರು-ಯಾರು ಎಲ್ಲಿಗೆ ಹೊಡೆದರು ಎಂದು ಹೇಳಲಾಗುವುದಿಲ್ಲ. ಎಲ್ಲರೂ ಸೇರಿ ಹೊಡೆದರು. ಯಾರ ಯಾರ ಕೈಯಲ್ಲಿ ಯಾವ-ಯಾವ ಕಣಗ ಇತ್ತು ಎಂದರೆ ಹೇಳಲಾಗುವುದಿಲ್ಲ. ಅಂಬಿಕಾಗೆ ಕಿವಿಗೆ ಹೊಡೆದು ಹರಿದಿರುತ್ತಾರೆ ಎಂದು ತಿಳಿಸಿದ್ದು, ಯಾವ ಕಿವಿ ಎಂದರೆ ಎಡಕಿವಿ. ಕಿವಿಯನ್ನು ಯಾರು ಹರಿದರು ಎಂದು ಹೇಳಲಾಗುವುದಿಲ್ಲ. ಬಸನಗೌಡನ ಕಾಲಿಗೆ ಏನಾಯಿತು ಎಂದರೆ ಮೂಳೆ ಜಾರಿತ್ತು. ಈ ರೀತಿ ಯಾವುದೇ ಗಾಯಗಳಾಗಿದ್ದರೂ ಸಹಾ ಸುಳ್ಳು ಹೇಳುತ್ತಿದ್ಧೆನೆಂದರೆ ಸರಿಯಲ್ಲ. ಆರೋಪಿತರು ಪ್ರಾಣ ಬೆದರಿಕೆ ಹಾಕಿಲ್ಲ ಎಂದರೆ ಸರಿಯಲ್ಲ. ಆರೋಪಿತರು ಹೊರತುಪಡಿಸಿ, ಬೇರೆ ಯಾರೂ ಇರಲಿಲ್ಲ. ಚಾ.ಸ.8 ರಿಂದ 10 ಸ್ಥಳದಲ್ಲಿ ಇರಲಿಲ್ಲ ಎಂದರೆ ಸರಿಯಲ್ಲ. ಆರೋಪಿತರ ಎಲ್ಲರ ಕೈಯಲ್ಲಿ ಕೋಲು ಇತ್ತು. ಒಬ್ಬರ ಕೈಯಿಂದ ಒಬ್ಬರು ತೆಗೆದುಕೊಂಡಿರುತ್ತಾರೆ, ಮೊದಲು ಚಂದ್ರಪ್ಪ ಹೊಡೆದಿರುತ್ತಾಥರೆ, ನಂತರ ಯಾರು ಹೊಡೆದರು ಹೇಳಲಾಗುವುದಿಲ್ಲ,

ಯಾರು ಹೊಡೆದರು ಎಂದು ಹೇಳಲಾಗುವುದಿಲ್ಲ. ನ್ಯಾಯಾಲಯದ ಮುಂದೆ ಬಡಿಗೆ ಇಲ್ಲ ಎಂದರೆ ಸರಿ. ನಾನು ಬಡಿಗೆಯನ್ನು ಪೊಲೀಸರಿಗೆ ಕೊಟ್ಟಿಲ್ಲ. ಬಡಿಗೆ ಏನಾಯಿತು ಗೊತ್ತಿಲ್ಲ. ಕಲ್ಲಿನಿಂದ ಎಲ್ಲರೂ ಹೊಡೆದಿರುತ್ತಾರೆ. ನ್ಯಾಯಾಲಯದ ಮುಂದೆ ಕಲ್ಲು ಇಲ್ಲ ಎಂದರೆ ಸರಿ. ನ್ಯಾಯಾಲಯದ ಮುಂದೆ ಪೊಲೀಸರಿಗೆ ಕಲ್ಲುಮತ್ತು ಬಡಿಗೆ ಇಲ್ಲ ಎಂದರೆ ಸರಿ. ಕಲ್ಲು ಮತ್ತು ಬಡಿಗೆಯನ್ನು ಆರೋಪಿತರು ಬಳಸಿಲ್ಲದ ಕಾರಣ ನಾನು ಪೊಲೀಸರಿಗೆ ಕೊಟ್ಟಿಲ್ಲ ಎಂದರೆ ಸರಿ. ಘಟನಾ ಸ್ಥಳದಲ್ಲಿ ನಾಲ್ಕು ಜನ ಸೇರಿದ್ದು, ನಾಗರಾಜ, ಬಸವನಗೌಡ, ಮಂಜುನಾಥ ತಂದೆ ಪ್ರಭು ಗೌಡ ಹಾಜರಿದ್ದರು. ನಾಗರಾಜ ಮತ್ತು ಮಂಜುನಾಥ ನಮ್ಮ ಊರಿನವರು, ಸಂಬಂಧಿಕರಲ್ಲ. ಅವರು ನನ್ನ ಎರಡನೇ ಅಣ್ಣ-ತಮ್ಮಂದಿರು ಎಂದರೆ ಸರಿ. ಪೊಲೀಸರು ಸ್ಥಳದಲ್ಲಿ ಪಂಚನಾಮೆ ಮಾಡಿಲ್ಲ, ಠಾಣೆಯಲ್ಲಿ ಪಂಚನಾಮೆ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಪೊಲೀಸರು ಸ್ಥಳದಲ್ಲಿ ಯಾವುದೇ ಮುದ್ದೆಮಾಲು ವಶಪಡಿಸಿಕೊಂಡಿಲ್ಲ ಎಂದರೆ ಸರಿಯಲ್ಲ. ಗಲಾಟೆ ಆದ ನಂತರ ಮೊದಲು ಪೊಲೀಸ್ ಠಾಣೆಗೆ ಹೋದೆ. ಆಗ ಮಧ್ಯಾಹ್ನ 2.00 ಗಂಟೆ ಆಗಿತ್ತು. 12.30 ಗಂಟೆಗೆ ದೂರು ತೆಗೆದುಕೊಂಡರು. ಚಿಗಟೇರಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದರು. ಚಿಕಿತ್ಸೆ ಪಡೆದಿಲ್ಲದಿದ್ದರೂ ಚಿಕಿತ್ಸೆ ಪಡೆದು ಎಂದು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ.

ದಿನಾಂಕ: 17.06.2018 ರಂದು ಬೆಳಿಗ್ಗೆ 8.00 ಗಂಟೆಗೆ ನನ್ನ ಮತ್ತು ಆರೋಪಿತರ ಮಧ್ಯ ಜಗಳ ಆಯಿತು ಎಂದರೆ ಸರಿ. ಆಗ ಚಂದ್ರಪ್ಪ ಮತ್ತು ನಾವು ಆರೋಪಿತರಿಗೆ ಹೊಡೆದೆವು ಎಂದರೆ ಸರಿಯಲ್ಲ. ಬೇವಿನ ಮರದ ಕಟ್ಟೆ ಹತ್ತಿರ ಜಗಳ ಆಯಿತು ಎಂದರೆ ಸರಿಯಲ್ಲ. ಚಂದ್ರಪ್ಪ ಕೂಡ ನಮ್ಮ ವಿರುದ್ದ ದೂರು ಕೊಟ್ಟಿದ್ದರು ಎಂದರೆ ಸರಿ. ಚಂದ್ರಪ್ಪ ದೂರು ಕೊಡುತ್ತಾರೆ ನಾನು ತಿಳಿದು 8.30 ಗಂಟೆಗೆ ಗಲಾಟೆ ಆಯಿತು ಅಂಥಾ ನಾನೇ ದೂರು

ಕೊಟ್ಟಿದ್ದೇನೆ ಎಂದರೆ ಸರಿಯಲ್ಲ. 8.30 ಗಂಟೆಗೆ ಯಾವುದೇ ಗಲಾಟೆ ಆಗಿಲ್ಲ, ಬೆಳಿಗ್ಗೆ 8.00 ಗಂಟಗೆ ನಾವೇ ಆರೋಪಿತರಿಗೆ ಹಲ್ಲೆ ಮಾಡಿದ್ದೇವೆ ಎಂದರೆ ಸರಿಯಲ್ಲ. ಆರೋಪಿತರು ಮನೆ ಹತ್ತಿರ ಬಂದು ಗಲಾಟೆ ಮಾಡಿದರು ಎಂದು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ಆರೋಪಿತರು ಹಲ್ಲೆಗೊಳಗಾಗಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯಲು ಹೋದಾಗ ನಾನು ಈ ಸುಳ್ಳು ದೂರು ಕೊಟ್ಟದ್ದೇನೆಂದರೆ ಸರಿಯಲ್ಲ. ಆರೋಪಿತರು ನಮ್ಮ ವಿರುದ್ದ ಅದೇ ದಿನ ದೂರು ಕೊಟ್ಟಿದ್ದಾರೆ ಎಂದರೆ ಸರಿ. ಅದು ಸಿ.ಸಿ.210/2018 ಅಂತಾ ದಾಖಲಾಗಿದೆ ಎಂದರೆ ಸರಿ. ಆರೋಪಿತರು ಸಲ್ಲಿಸಿರುವ ಪ್ರಕರಣಕ್ಕೆ ಪ್ರತಿರಕ್ಷೆಯಾಗಿ ನಾನು ಈ ದೂರು ಸಲ್ಲಿಸಿದ್ದೇನೆಂದರೆ ಸರಿಯಲ್ಲ. ಆರೋಪಿತರು ನನಗೆ ಹೊಡೆದಿಲ್ಲ, ಬಡೆದಿಲ್ಲ, ಪ್ರಾಣ ಬೆದರಿಕೆ ಕೂಡ ಹಾಕಿಲ್ಲ ಎಂದರೆ ಸರಿಯಲ್ಲ. ಸುಳ್ಳು ದೂರು ಸಲ್ಲಿಸಿ, ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

ಮರುವಿಚಾರಣೆ: ಇಲ್ಲ:

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತಲೇಖನದಂತೆ ಗಣಕೀಕೃತ ಗೊಳಿಸಲಾಯಿತು.)

ಓ ಹೇ ಕೇ ಸರಿ ಇದೆ.

ಹಿರಿಯ ಸಿವಿಲ್ ಮತ್ತು ಜೆ ಎಂ ಎಫ್ ಸಿ
ನ್ಯಾಯಾಧೀಶರು, ಹರಪನಹಳ್ಳಿ.